**ನಿಮ್ಮಲ್ಲಿ ಅವೈದಿಕತೆಯ ಹುಡುಕಾಟ ಆರಂಭವಾದದ್ದು ಹೇಗೆ?**

ನಾನು ಆನರ್ಸ್ ಮಾಡೋವಾಗಲೇ ನನಗೆ ಮತ್ತೆ ಮತ್ತೆ ಅನ್ನಿಸ್ತಿತ್ತು, ಸಾಹಿತ್ಯ ಸಾಮಾನ್ಯ ಮನುಷ್ಯರ ಪರವಾಗಿಲ್ಲ ಅಲ್ವಾ ಅಂತ. ಯಾವಾಗಲೂ ಉಳ್ಳವರದ್ದೇ ಮೇಲುಗೈ. ಯಾಕೆ ಹೀಗೆ ಅಂತ. ನನ್ನ ಬದುಕಿನ ಅನುಭವಗಳು ಇದನ್ನೇ ಸಮರ್ಥಿಸಿದವು. ಯಾವಾಗಿನಿಂದಲೂ ಇದು ಹೀಗೇ ಅನ್ನೋದಾದರೆ, ಇದನ್ನು ರೂಪಿಸಿ, ನಿಯಂತ್ರಿಸ್ತಾ ಇರುವವರು ಯಾರು? ಅವರ ಉದ್ದೇಶ ಏನು? ಇದು ಅಮಾನವೀಯ, ಅನಾಗರಿಕ ಅಂತ ಗೊತ್ತಿದ್ರೂ ಯಾಕೆ ಇವರನ್ನು ಶಕ್ತವಾಗಿ ವಿರೋಧಿಸೋಕೆ ಆಗ್ತಾ ಇಲ್ಲ. ಜನಸಾಮಾನ್ಯರ ಬದುಕು ಬವಣೆಗಳು ಇವರನ್ನ ತಾಕೋದೇ ಇಲ್ಲವಲ್ಲ ಅಂತ ನನಗೆ ತೀವ್ರವಾಗಿ ಅನಿಸೋಕೆ ಶುರುವಾಯ್ತು.

ಇಲ್ಲೊಂದು ಸಂದರ್ಭ ಹೇಳ್ತೀನಿ. ಆರ್.ಸಿ. ಹಿರೇಮಠರು ನನಗೆ ಪಿಎಚ್.ಡಿ. ಮಾಡೋಕೆ ಹೇಳಿದ್ರು 'ವಚನಗಳ ಸಾಮಾಜಿಕ ಆರ್ಥಿಕ ಅಂಶಗಳು' ಅನ್ನುವ ವಿಷಯದ ಮೇಲೆ. ಉತ್ಸಾಹದಿಂದಲೇ ಶುರು ಮಾಡಿದೆ. ಅಧ್ಯಯನ ಮಾಡ್ತಾ ಮಾಡ್ತಾ ನನಗೆ ಆಂಟಿ ಥೀಸಿಸ್ ಆಲೋಚನೆಗಳು ಬರೋದಕ್ಕೆ ಶುರುವಾಯ್ತು. ಅಪಾರ ಸಾಮಾಜಿಕ ಕಾಳಜಿಯ ವಚನಕಾರರಲ್ಲಿ ಕೂಡ 'ಸಾಮಾಜಿಕ ಮನುಷ್ಯ'ನಿಗೆ ಜಾಗ ಇಲ್ಲ ಅನ್ನಿಸಿತು. ಪಿಎಚ್.ಡಿ. ಅಲ್ಲಿಗೇ ನಿಲ್ಲಿಸಿ ಸುಮ್ಮನಾಗಿ ಬಿಟ್ಟೆ. ಅವರು ಮಾತ್ರ ಸಿಕ್ಕಾಗಲೆಲ್ಲ, 'ಅಯ್ಯಾ , ನೀನು ಬರೆದುಕೊಡು ಸಾಕು' ಅನ್ನೋರು. ಆದರೆ ನನಗೆ ಅದು ಒಪ್ಪಿಗೆಯಾಗಲೇ ಇಲ್ಲ.

ಆದರೆ ಈ ವಿಚಾರಗಳೇ ನನ್ನ 'ಮರು ಚಿಂತನೆ' ಕೃತಿಯಾಗಿ ರೂಪುಗೊಂಡಿತು. ಬ್ರಾಹ್ಮಣೀಕರಣದ ಹುನ್ನಾರಗಳಿಂದ ತಪ್ಪಿಸಿಕೊಳ್ಳುವುದು ಅವೈದಿಕ ಚಳವಳಿಗಳಿಗೂ ಬಹಳ ಕಷ್ಟ. ವೈದಿಕತೆಯ ಕಾರ್ಯತಂತ್ರಗಳು ಏನೆಲ್ಲ ಮಾಡಿ ಎಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ ಅನ್ನುವುದನ್ನು ಹೇಳೋದಕ್ಕೆ ನಾನು ಪ್ರಯತ್ನಪಡ್ತಾ ಇದ್ದೀನಿ. ವಚನ ಚಳವಳಿಗೇ ಅದು ಸಾಧ್ಯವಾಗಲಿಲ್ಲ ಅಂದರೆ... ಎನ್ನುವ ಪ್ರಶ್ನೆ ನನ್ನನ್ನ ಯಾವಾಗಲೂ ಕಾಡಿದೆ.

ವಚನ ಚಳವಳಿಯ ಅಧ್ಯಯನಗಳು ಬಹುತೇಕ ಅದರ ಆರಾಧನೆಗೇ ಸೀಮಿತವಾಗಿ ಬಿಟ್ಟಿವೆ. ಅದರ ನಿಜವಾದ ಸ್ವರೂಪವನ್ನು ನಾವು ಮುನ್ನೆಲೆಗೆ ತರಬೇಕು ಅನ್ನಿಸುತ್ತೆ ನನಗೆ. ಕೆಳ ಜಾತಿ ಮತ್ತು ಕೆಳವರ್ಗದ ವಚನಕಾರರನ್ನ ಇನ್ನೂ ಆಳವಾದ ಅಧ್ಯಯನಕ್ಕೆ ತೊಗೋಬೇಕು. ನನಗನ್ನಿಸುತ್ತೆ, ಇವತ್ತಿನ ಜಗತ್ತಿಗೇ ಒಂದು ಮಾದರಿಯಾಗಬಲ್ಲದ್ದು ವಚನ ಸಾಹಿತ್ಯ. ಅದನ್ನ ಸಂಸ್ಥೀಕರಣದಿಂದ ಮುಕ್ತಗೊಳಿಸಿದಾಗ ಮಾತ್ರ ಅದು ತನ್ನೆಲ್ಲ ಶಕ್ತಿ ಸಾಮರ್ಥ್ಯದೊಂದಿಗೆ ವಿಶ್ವದ ಎದುರಿಗೆ ಕಾಣಿಸಬಲ್ಲದು ಅಂತ.

ಒಂದು ಕಡೆ ನಾನು ಹೇಳಿದೀನಿ, ಕೀರ್ತನೆಗಳು 'ಕಾವ್ಯಲಯ'ವಾದರೆ ವಚನಗಳು 'ಜೀವಲಯ' ಅಂತ. ಆದರೆ ಇಂಥ ಜನಪರ, ಜೀವಪರ ಆಲೋಚನೆಗಳನ್ನ ನಾವು ಬ್ರಾಹ್ಮಣೀಕರಣಕ್ಕೆ ಒಳಗು ಮಾಡಿರೋದು ದುರಂತ. ಕನ್ನಡ ಬೇಸಾಯಗಾರರನ್ನ ಸಂಸ್ಕೃತ ಕೃಷಿಕಾರರಾಗಿಸಿಬಿಟ್ಟಿದ್ದೀವಿ.

ವಚನಗಳ ಆಶಯವನ್ನು ಎಲ್ಲಿ ಸಾಧಿಸುವ ಪ್ರಯತ್ನ ಮಾಡಿದೀವಿ ನಾವು? ಅವರ ಮುಕ್ತ ಮನುಷ್ಯನ ಚಿಂತನೆಯನ್ನು ಅಳವಡಿಸಿಕೊಳ್ಳೋಕೆ ಸಾಧ್ಯವಾಗಿದೆಯಾ ನಮಗೆ? ಮಹಾ ಆತ್ಮವಂಚನೆಯ ಕಾಲ ಇದು ಅನ್ನಿಸುತ್ತೆ – ಬೀದಿಯಲ್ಲಿ ಸೆಕ್ಯುಲರ್, ಮನೇಲಿ ಸೆಕ್ಟೇರಿಯನ್‌ಗಳಾಗಿರುವವರೇ ಹೆಚ್ಚು. ಹೀಗೆಲ್ಲ ಹೇಳಿದ ಕೂಡಲೆ ನನ್ನನ್ನ ಬ್ರಾಹ್ಮಣ ವಿರೋಧಿ, ಲಿಂಗಾಯಿತ ವಿರೋಧಿ ಅಂತೆಲ್ಲಾ ಕರೀತಾರೆ. ಖಂಡಿತಾ ಅಲ್ಲ. ಬ್ರಾಹ್ಮಣರ ಕೈತುತ್ತು ತಿಂದು, ಲಿಂಗಾಯಿತರ ಆಶ್ರಯದಲ್ಲಿ ಬೆಳೆದೋನು ನಾನು. ಆದರೆ ವಾಸ್ತವವನ್ನು ಮರೆಮಾಚಿ ನಾವು ಸಾಧಿಸೋದು ಏನನ್ನ? ನನಗಂತೂ ಷಟ್‌ಸ್ಥಳ ಸಿದ್ಧಾಂತಗಳು ಮೊದಲಾದವು ವಚನ ಚಳವಳಿಯ ಆಶಯಗಳಿಗೆ ತದ್ವಿರುದ್ಧವಾದವು ಅಂತಲೇ ಅನ್ನಿಸುತ್ತೆ. ವಚನ ಚಳವಳಿಯಲ್ಲಿ ಹಲವು ಸ್ಕೂಲುಗಳಿದ್ದಾವೆ. ಅವುಗಳನ್ನು ನಾವು ಆಳವಾಗಿ ಅಧ್ಯಯನ ಮಾಡಬೇಕು.